# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹಳಿಯಾಳ

**ಸಿ.ಸಿ. ನಂ 305-2020**

ದೂರುದಾರ : ಸರ್ಕಾರದ ಪರವಾಗಿ ಹಳಿಯಾಳ
ಹಳಿಯಾಳ ಪೊಲೀಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿ : 1. ಉಳವಪ್ಪಾ ತಂದೆ ಹಡಪದ,
ವಯಾಃ48 ವರ್ಷ ವೃತ್ತಿಃ ಕೆ.ಎಸ್.ಆರ್.ಟಿ.ಸಿ ಬಸ್
ಚಾಲಕ, ಬ್ಯಾಚ ನಂಬರ್ 774/412
ಸಾಃ ಸೋಮನಕೊಪ್ಪಾ ಗ್ರಾಮ
ತಾಃ ಕಲಘಟ್ಟಗಿ, ಜಿಲ್ಲೆಃ ಧಾರವಾಡ.

ದಂಡ ಪ್ರಕ್ರಿಯ ಸಹಿಂತೆ ಕಲಂ. 251 ರ ಅಡಿ ಆರೋಪಣ ಸಾರಾಂಶ

ನಾನು ದೇಶಭೂಷಣ ಕೌಜಲಗಿ ಬಿ.ಎ.,ಎಲ್.ಎಲ್.ಬಿ., ಪ್ರ.ದ.ನ್ಯಾದಂ ಹಳಿಯಾಳ ಆದರ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ.

ಆರೋಪಿಯಾದ ನೀವು ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಳಿಯಾಳ ತಾಲೂಕು ಹಲಸಿ ಗ್ರಾಮದ ಗೊರೆಖಾನ ಪೆಂಟ್ರೋಲ್ ಪಂಪ್ ಬಳಿ ಹಳಿಯಾಳ ಕೇಸರೋವಳ್ಳಿ ರಸ್ತೆಯ ಮೇಲೆ ದಿನಾಂಕ 24-01-2020 ರಂದು ಮಧ್ಯಾಹ್ನ 12-00 ಗಂಟೆಗೆ ಕೆ.ಎಸ್.ಆರ್.ಟಿ.ಸಿ ಬಸ್ ನಂಃ ಕೆ.ಎ-42/ಎಫ್-1286 ನೇದ್ದನ್ನು ಕೆಸರೋಳ್ಳಿ ಕಡೆಯಿಂದ ಹಳಿಯಾಳ ಕಡೆಗೆ ಅತೀವೇಗ ಮತ್ತು ಅಜಾಗುರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ನಿಮ್ಮ ವಿರುದ್ಧ ದಿಕ್ಕಿನಲ್ಲಿ ಹಳಿಯಾಳ ಕಡೆಯಿಂದ ಕಾಸರೊಳ್ಳಿ ಕಡೆಗೆ ಬರುತ್ತಿದ್ದ ಮೋಟಾರ ಸೈಕಲ್ ನಂಬರ್ ಕೆಎ 65/ಇ-6268 ನೇದ್ದಕ್ಕೆ ಡಿಕ್ಕಿ ಹೊಡೆದು ಅಪಘಾತ ಪಡಿಸುವ ಮೂಲಕ ಭಾ.ದಂ.ಸಂ.ಕಲಂ.279 ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ ಆರೋಪಿಯಾದ ನೀವು ಮೇಲೆ ಈ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಈ ಮೇಲಿನ ಕೃತ್ಯದಿಂದ ಮೋಟಾರ ಸೈಕಲ್ ನಂಬರ್:ಕೆಎ-

65/ಇ-6268 ನೇದ್ದರ ಸವಾರ ಮಂಜುನಾಥ ತಂದೆ ಮುನ್ನಪ್ಪ ಮೀರಾಶಿಗೆ ತಲೆಗೆ, ಬಲಗೈ , ಮತ್ತು ಬಲಗಾಲಿಗೆ ಹಾಗೂ ಶಿವಾಜಿ ತಂದೆ ರಾಮಚಂದ್ರ ಮೀರಾಶಿಗೆ ಬಲಗೈ , ಬಲಗಾಲಿಗೆ, ಮುಖಕ್ಕೆ ಮತ್ತು ತಲೆಗೆತೀವ್ರ ಸ್ವರೂಪದ ಮಾರಣಾಂತಿಕ ಗಾಯನೋವು ಪಡಿಸಿದ್ದರಿಂದ ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿ ಅವರಿಬ್ಬರ ಸಾವಿಗೆ ನೀವು ಅಪರಾಧಿಕ ನರಹತ್ಯೆ ಮಾಡುವ ಉದ್ದೇಶವಿಲ್ಲದೇ ಮಾಡಿರುವ ಅಪಘಾತವೇ ಕಾರಣ ಆಗಿದ್ದು ಈ ಮೂಲಕ ಭಾ.ದಂ.ಸಂ ಕಲಂ 304(ಎ) ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರ 1 ಶ್ನೆ: ಈಗ ಓದಿ ಹೇಳಿದ ಆರೋಪಣ ಸಾರಾಂಶ ನಿಮಗೆ ತಿಳಿಯಿತೇ?

ಉತ್ತರ: ತಿಳಿದುಕೊಂಡಿದ್ದೇನೆ

ಪ್ರಶ್ನ2: ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯಾ?

ಉತ್ತರಃ ಒಪ್ಪಿಕೊಳ್ಳುವುದಿಲ್ಲ, ವಿಚಾರಣೆ ಆಗಬೇಕು

(ಆರೋಪಿತನಿಗೆ ಆರೋಪಣ ಸಾರಾಂಶವನ್ನು ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ , ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

23/01/22
ಪ್ರ.ದ.ನ್ಯಾದಂ. ಹಳಿಯಾಳ

ಹಳಿಯಾಳಃ
ದಿಃ 23-02-2021